**ದಿನಾಂಕ: 25.5.2017 ರಂದು ಬೆಳಿಗ್ಗೆ 11.00 ಗಂಟೆಗೆ ಹೈದ್ರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಕಲಬುರಗಿಯ ಸಭಾಂಗಣದಲ್ಲಿ ಡಾ॥ ಶರಣ ಪ್ರಕಾಶ ಪಾಟೀಲ್, ಅಧ್ಯಕ್ಷರು ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು ಮತ್ತು ಕಲಬುರಗಿ ಜಿಲ್ಲೆಯ ಉಸ್ತುವಾರಿ ಸಚಿವರು ಇವರ ಅಧ್ಯಕ್ಷತೆಯಲ್ಲಿ ಜರುಗಿದ ಮಂಡಳಿಯ 2017-18 ನೆ ಸಾಲಿನ ಪ್ರಥಮ ಸಭೆಯ ನಡುವಳಿಕೆಗಳು.**

ಶ್ರೀ ಹರ್ಷಗುಪ್ತ, ಭಾ.ಆ.ಸೇ, ಕಾರ್ಯದರ್ಶಿಗಳು, ಹೈ.ಕ.ಪ್ರ.ಅ.ಮಂಡಳಿ, ಕಲಬುರಗಿ ಇವರು ಸಭೆಯಲ್ಲಿ ಉಪಸ್ಥಿತರಿದ್ದ ಗೌರವಾನ್ವಿತ ಅಧ್ಯಕ್ಷರು, ಹೈ.ಕ.ಪ್ರ.ಅ.ಮಂಡಳಿ, ಕಲಬುರಗಿ ಹಾಗೂ ಸದಸ್ಯರನ್ನು ಸ್ವಾಗತಿಸಿದರು. ಸರ್ಕಾರದ ಸುತ್ತೋಲೆಯಲ್ಲಿನ ನಿರ್ದೇಶನದಂತೆ ಒಟ್ಟು 28 ಸದಸ್ಯರುಗಳಲ್ಲಿ 16 ಸದಸ್ಯರು ಹಾಜರಿದ್ದು, ಕೋರಂ ಭರ್ತಿಯಾಗಿರುವುದನ್ನು ಖಚಿತಪಡಿಸಿ ಸನ್ಮಾನ್ಯ ಅಧ್ಯಕ್ಷರಿಗೆ ಸಭೆಯನ್ನು ಮುಂದುವರೆಸಲು ವಿನಂತಿಸಿದರು.

ಡಾ. ಶರಣಪ್ರಕಾಶ ಪಾಟೀಲ್, ಗೌರವಾನ್ವಿತ ಅಧ್ಯಕ್ಷರು ಹಾಗು ವೈದ್ಯಕೀಯ ಶಿಕ್ಷಣ ಸಚಿವರು, ಇವರು ಸಭೆಯಲ್ಲಿ ಹಾಜರಿದ್ದ ಗಣ್ಯರು ಹಾಗು ಸದಸ್ಯರಿಗೆ ಸ್ವಾಗತವನ್ನು ಕೋರುತ್ತಾ ಸಭೆಯ ವಿಷಯಸೂಚಿಯ ಸಂಕ್ಷಿಪ್ತ ವಿವರಣೆಯೊಂದಿಗೆ ಸಭೆಯನ್ನು ಪ್ರಾರಂಭಿಸಿದರು.

| | |
|---|---|
| **ವಿಷಯ – 1** | ಹಿಂದಿನ ಸಭೆಯ ನಡುವಳಿಕೆಗಳ ದೃಢೀಕರಣ. |
| ಚರ್ಚೆ | ಸನ್ಮಾನ್ಯ ಅಧ್ಯಕ್ಷರ ಅನುಮತಿಯೊಂದಿಗೆ ಕಾರ್ಯದರ್ಶಿಗಳು ಈ ಹಿಂದೆ ದಿನಾಂಕ:16.01.2017 ರಂದು ನಡೆದ ಮಂಡಳಿ ಸಭೆಯ ನಡುವಳಿಕೆಗಳನ್ನು ಸರ್ಕಾರಕ್ಕೆ ಸಲ್ಲಿಸುತ್ತಾ, ಅನುಮೋದನೆಗಾಗಿ ಘನತೆವೆತ್ತ ರಾಜ್ಯಪಾಲರು, ಕರ್ನಾಟಕ ಸರ್ಕಾರ ಇವರಿಗೆ ಸಲ್ಲಿಸಿರುವುದಾಗಿ ಸಭೆಗೆ ತಿಳಿಸಿದರು. |
| ನಿರ್ಣಯ | ಮಂಡಳಿ ಸಭೆಯ ನಡುವಳಿಕೆಗಳನ್ನು ಕಂಡಿಕೆವಾರು ಅನುಪಾಲನೆ ಜೊತೆಗೆ ಸಭೆಯಲ್ಲಿ ಓದಿ ದೃಢೀಕರಿಸಲಾಯಿತು. |
| **ವಿಷಯ – 2** | ಪ್ರಗತಿ ವರದಿ – ಅನುಬಂಧ 1 – ಲಗತ್ತಿಸಿದೆ. |
| ಚರ್ಚೆ | ಮಾನ್ಯ ಅಧ್ಯಕ್ಷರು, ಹೈ.ಕ.ಪ್ರ.ಅ.ಮಂಡಳಿ, ಕಲಬುರಗಿ ಇವರು 2013-14 ನೆ ಸಾಲಿನ ಭೌತಿಕ ಪ್ರಗತಿಯು 100% ರಷ್ಟು ಸಾಧನೆಯಾಗಿದೆ ಹಾಗು ಆರ್ಥಿಕ ಪ್ರಗತಿಯು 95% ರಷ್ಟಾಗಿದ್ದು, ಒಟ್ಟು 586 ಕಾಮಗಾರಿಗಳಲ್ಲಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿವೆ ಹಾಗು ಬಾಕಿ ಉಳಿದ ಬಿಲ್ಲುಗಳನ್ನು ತಿಂಗಳಲ್ಲೆ ಪಾವತಿಸಲಾಗುವುದು ಎಂದು ವಿವರಿಸಿದರು. 2014-15 ನೆ ಸಾಲಿನ 1963 ಅನುಮೋದಿತ ಕಾಮಗಾರಿಗಳಲ್ಲಿ 1470 ಕಾಮಗಾರಿಗಳು ಪೂರ್ಣಗೊಂಡಿದ್ದು, 406 ಕಾಮಗಾರಿಗಳು ಪ್ರಗತಿಯ ಹಂತದಲ್ಲಿವೆ ಹಾಗು 87 ಕಾಮಗಾರಿಗಳು DPR/ADM/Tender Stages ಹಂತಗಳಲ್ಲಿವೆ ಹಾಗು ಒಟ್ಟು 86% ರಷ್ಟು ಭೌತಿಕ ಪ್ರಗತಿ ಹಾಗು ಆರ್ಥಿಕ ಪ್ರಗತಿಯು 78% ಆಗಿದೆ. ಮಾನ್ಯ ಅಧ್ಯಕ್ಷರು ಹೈ.ಕ.ಪ್ರ.ಅ.ಮಂಡಳಿ, ಕಲಬುರಗಿ ಇವರು ಮಂಡಳಿಯ ಎಲ್ಲಾ ಸದಸ್ಯರಿಗೆ ಕಾಮಗಾರಿಗಳ ಪ್ರಗತಿಯ ಕುರಿತು ಕೆ.ಡಿ.ಪಿ ಸಭೆಯಲ್ಲಿ ಮೇಲ್ವಿಚಾರಣೆ ಹಾಗು ವಿಮರ್ಶೆಯನ್ನು ಕೈಗೊಳ್ಳಬಹುದೆಂದು ಸೂಚನೆ ನೀಡಿದರು ಹಾಗೂ ಈ ಎಲ್ಲಾ ಕಾಮಗಾರಿಗಳನ್ನು ಜುಲೈ – 2017 ರೊಳಗಾಗಿ ಪೂರ್ಣಗೊಳಿಸಬಹುದೆಂದರು. 2015-16 ನೆ ಸಾಲಿನಲ್ಲಿ 3096 ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ ಹಾಗು 1617 ಕಾಮಗಾರಿಗಳು ಪೂರ್ಣಗೊಂಡಿವೆ, 1186 ಕಾಮಗಾರಿಗಳು ಪ್ರಗತಿ ಹಂತದಲ್ಲಿವೆ ಮತ್ತು 293 ಕಾಮಗಾರಿಗಳು DPR/ADM/Tender Stages ಹಂತಗಳಲ್ಲಿವೆ. ಭೌತಿಕ ಪ್ರಗತಿಯು 72% ಹಾಗು ಆರ್ಥಿಕ ಪ್ರಗತಿಯು 60% ರಷ್ಟು ಸಾಧನೆಯಾಗಿದೆ. ಪ್ರಗತಿ ಹಂತದಲ್ಲಿರುವ ಕಾಮಗಾರಿಗಳನ್ನು ಸೆಪ್ಟಂಬರ್ – 2017 ರೊಳಗಾಗಿ ಪೂರ್ಣಗೊಳಿಸಲು ಹಾಗು DPR/ADM/Tender Stages ಹಂತಗಳಲ್ಲಿರುವ 293 ಕಾಮಗಾರಿಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಯಿತು. ಶ್ರೀ ಭೀಮಾ ನಾಯಕ್, ವಿಧಾನ ಸಭಾ ಸದಸ್ಯರು, ಹಗರಿಬೊಮ್ಮನಹಳ್ಳಿ ಇವರು ಕಾಮಗಾರಿಗಳನ್ನು ರದ್ದುಗೊಳಿಸುವಿಕೆ, ಕಾಮಗಾರಿಗಳ ಬದಲಾವಣೆ, ಮೈಕ್ರೋದಿಂದ ಮ್ಯಾಕ್ರೋಗೆ ಅನುದಾನ ಮರುಹಂಚಿಕೆ ಇವುಗಳಿಗೆ ಸಂಬಂಧಿಸಿದಂತೆ ಹಲವು ಆಕ್ಷೇಪಣೆಗಳನ್ನು ಎತ್ತಿದರು ಹಾಗು 2015-16 ನೆ ಸಾಲಿಗೆ ಸಂಬಂಧಿಸಿದಂತೆ ಈ ಕ್ಷೇತ್ರದಲ್ಲಿ ಒಂದು ಅಥವಾ ಮತ್ತೊಂದು ಕಾರಣದಿಂದ ಕಾಮಗಾರಿಯ ಅನುಷ್ಠಾನದಲ್ಲಿ ಉಂಟಾದ ವಿಳಂಬತೆಯಿಂದಾಗಿ ಯಾವುದೇ ಕಾಮಗಾರಿ ಪ್ರಾರಂಭವಾಗಿರುವುದಿಲ್ಲ ಎಂದು ವಿವರಿಸಿದರು. ಶ್ರೀ ಅಶೋಕ ಖೇಣಿ, ವಿಧಾನ ಸಭಾ ಸದಸ್ಯರು, ಬೀದರ್ (ದಕ್ಷಿಣ) ಇವರು ಅವರ ಕ್ಷೇತ್ರದಲ್ಲಿಯೂ ಸಹ ಸೈಟ್ ಲಭ್ಯವಿದ್ದಾಗ್ಯೂ, ಸೈಟ್ ಲಭ್ಯವಿರದ ಇರದ ಕಾರಣದಿಂದಾಗಿ ಕಾಮಗಾರಿಗಳನ್ನು ಗಮನಕ್ಕೆ ತರದೆ ಬದಲಾವಣೆ ಮಾಡಿರುವುದು ಕಂಡುಬಂದಿದೆ ಹಾಗು ಅನುದಾನ ಮರುಹಂಚಿಕೆಯಿಂದಾಗಿ ಹಲವು ಕಾಮಗಾರಿಗಳನ್ನು ರದ್ದುಗೊಳಿಸಲಾಗಿದೆ ಎಂದು ವ್ಯಕ್ತಪಡಿಸಿದರು. ಉಳಿದ ಮಂಡಳಿ ಸದಸ್ಯರು ಸಹ ಸದರಿ ಚರ್ಚೆಯಲ್ಲಿ ಪಾಲ್ಗೊಂಡರು. 2016-17 ನೆ ಸಾಲಿನಲ್ಲಿ ಅನುಮೋದನೆಗೊಂಡ 3326 ಕಾಮಗಾರಿಗಳಲ್ಲಿ 281 ಕಾಮಗಾರಿಗಳು ಪೂರ್ಣಗೊಂಡಿದ್ದು, 1484 ಕಾಮಗಾರಿಗಳು ಪ್ರಗತಿ ಹಂತದಲ್ಲಿವೆ 1670 ಕಾಮಗಾರಿಗಳು DPR/ADM/Tender Stages ಹಂತಗಳಲ್ಲಿವೆ. ಸದರಿ ಸಾಲಿನಲ್ಲಿ ಒಟ್ಟು 36% ರಷ್ಟು ಭೌತಿಕ ಪ್ರಗತಿ, 24% ರಷ್ಟು ಆರ್ಥಿಕ ಪ್ರಗತಿ ಆಗಿದೆ.<br>2013-14 ರಿಂದ 2016-17 ನೆ ಸಾಲಿನವರೆಗೆ ಅನುಮೋದನೆಗೊಂಡ 9615 ಕಾಮಗಾರಿಗಳಲ್ಲಿ |

| | |
|---|---|
| | 4065 ಕಾಮಗಾರಿಗಳು ಪೂರ್ಣಗೊಂಡಿದ್ದು, 3441 ಕಾಮಗಾರಿಗಳು DPR/ADM/Tender Stages ಹಂತಗಳಲ್ಲಿವೆ ಹಾಗು ಸದರಿ 4 ಸಾಲಿನಲ್ಲಿ ಹಂಚಿಕೆಯಾದ ಅನುದಾನದ ಮೊತ್ತದಲ್ಲಿ 68% ಭೌತಿಕ ಪ್ರಗತಿ ಹಾಗು 53% ರಷ್ಟು ಆರ್ಥಿಕ ಪ್ರಗತಿಯಾಗಿದೆ. |
| ನಿರ್ಣಯ | 1. 2013–14 ನೆ ಸಾಲಿನ ಕಾಮಗಾರಿಗಳನ್ನು ಜೂನ್ – 2017 ರ ಒಳಗಾಗಿ ಅಂತಿಮಗೊಳಿಸುವುದು.<br>2. 2014–15 ನೆ ಸಾಲಿನ ಕಾಮಗಾರಿಗಳನ್ನು ಆಗಸ್ಟ್ – 2017 ರ ಒಳಗಾಗಿ ಪೂರ್ಣಗೊಳಿಸುವುದು.<br>3. 2015–16 ನೆ ಸಾಲಿನ ಕಾಮಗಾರಿಗಳನ್ನು ಅಕ್ಟೋಬರ್ – 2017 ರ ಒಳಗಾಗಿ ಪೂರ್ಣಗೊಳಿಸುವುದು.<br>4. 2016–17 ನೆ ಸಾಲಿನ ಕಾಮಗಾರಿಗಳನ್ನು ಜನವರಿ – 2018 ರ ಒಳಗಾಗಿ ಪೂರ್ಣಗೊಳಿಸುವುದು.<br>5. 2017–18 ನೆ ಸಾಲಿನ ಕಾಮಗಾರಿಗಳನ್ನು ಮಾರ್ಚ – 2018 ರೊಳಗಾಗಿ ಪೂರ್ಣಗೊಳಿಸಲು ಪ್ರಸ್ತಾಪಿಸಲಾಗಿದೆ.<br>6. ಎಸ್‌ಸಿಪಿ / ಟಿಎಸ್‌ಪಿ ಹೊರತು ಪಡಿಸಿದ ಹೆಚ್.ಕೆ.ಆರ್.ಡಿ.ಬಿ ಯಿಂದ ಬಿಡುಗಡೆಯಾದ ಅನುದಾನವನ್ನು ಯಾವುದೇ ವರ್ಷದ ಅನುಮೋದಿತ ಕ್ರಿಯಾಯೋಜನೆಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಬಳಸಬಹುದು.<br>7. ಅವಶ್ಯಕತೆಯಿದ್ದಲ್ಲಿ ಸಂಬಂಧಿಸಿದ ವಿಧಾನಸಭಾ ಸದಸ್ಯರ ಸಮಾಲೋಚನೆಯೊಂದಿಗೆ ಕಾಮಗಾರಿಗಳನ್ನು ಬದಲಾಯಿಸಬಹುದು. |
| **ವಿಷಯ – 3** | ಬದಲಾವಣೆಗೊಂಡ ಕಾಮಗಾರಿಗಳ ಅನುಮೋದನೆ – ಅನುಬಂಧ 2 – ಲಗತ್ತಿಸಿದೆ. |
| ಚರ್ಚೆ | ಮಾನ್ಯ ಕಾರ್ಯದರ್ಶಿಗಳು, ಹೈ.ಕ.ಪ್ರ.ಅ.ಮಂಡಳಿ, ಕಲಬುರಗಿ ಸೈಟ್ ಸಮಸ್ಯೆಯಿಂದಾಗಿ, ತಾಂತ್ರಿಕ ಸಮಸ್ಯೆಯಿಂದ ಹಾಗು ಇನ್ನಿತರ ಕಾರಣಗಳಿಂದ ಬದಲಾವಣೆಗೊಂಡ ಕಾಮಗಾರಿಗಳ ಯಾದಿಯನ್ನು ಅನುಮೋದನೆಗಾಗಿ ಸಭೆಯಲ್ಲಿ ಮಂಡಿಸಿದರು. ಶ್ರೀ ಅಶೋಕ ಖೇಣಿ, ವಿಧಾನಸಭಾ ಸದಸ್ಯರು, ಬೀದರ್ (ದಕ್ಷಿಣ), ಶ್ರೀ ಭೀಮಾನಾಯಕ, ವಿಧಾನಸಭಾ ಸದಸ್ಯರು, ಹಗರಿಬೊಮ್ಮನಹಳ್ಳಿ, ಶ್ರೀ ಬಿ.ಎಂ.ನಾಗರಾಜ್, ವಿಧಾನಸಭಾ ಸದಸ್ಯರು, ಸಿರುಗುಪ್ಪ ಇವರು ಅವರ ಕ್ಷೇತ್ರಗಳಲ್ಲಿ ಹಂಚಿಕೆಯಾದ ಕಾಮಗಾರಿಗಳು ಅವರನ್ನು ವಿಚಾರಿಸದೆ ಬದಲಾವಣೆಗೊಂಡಿವೆ ಎಂದು ಅಭಿಪ್ರಾಯಪಟ್ಟರು. ಬದಲಾವಣೆ ಮಾಡಿದ ಕಾಮಗಾರಿಗಳಿಗೆ ಹಂಚಿಕೆ ಮಾಡಿದ ಮೊತ್ತವನ್ನು ಮ್ಯಾಕ್ರೋ ನಿಧಿಗೆ ಪುನರ್ವಿನಿಯೋಗ ಮಾಡಲಾಗಿದ್ದು, ಮ್ಯಾಕ್ರೋ ನಿಧಿಯಲ್ಲಿ ತೆಗೆದುಕೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳನ್ನು ಬೋರ್ಡನಿಂದ ಆಯ್ಕೆ ಮಾಡಲಾಗುತ್ತಿದೆ ಎಂದು ತಿಳಿಸಿದರು. ಮಾನ್ಯ ಅಧ್ಯಕ್ಷರು, ಹೈ.ಕ.ಪ್ರ.ಅ.ಮಂಡಳಿ, ಕಲಬುರಗಿ ಇವರು ಮುಂದೆ ಕಾಮಗಾರಿಗಳ ರದ್ದುಗೊಳಿಸುವಿಕೆ / ಬದಲಾವಣೆಯನ್ನು ಸಂಬಂಧಿತ ಜಿಲ್ಲಾಧಿಕಾರಿಗಳ ಸೂಚನೆಯ ಮೇರೆಗೆ ಮಾಡಲಾಗುವುದು ಎಂದರು. |
| ನಿರ್ಣಯ | ಸಂಬಂಧಿತ ಕ್ಷೇತ್ರದ ವಿಧಾನಸಭಾ ಸದಸ್ಯರೊಂದಿಗೆ ಚರ್ಚಿಸಿ ಕಾಮಗಾರಿಗಳ ರದ್ದುಗೊಳಿಸುವಿಕೆ / ಬದಲಾವಣೆಯನ್ನು ಮಾಡಲಾಗುವುದು ಎಂದು ಸಭೆ ನಿರ್ಣಯಿಸಿತು. ಅಲ್ಲದೆ ಅನುಬಂಧ – 2 ರಲ್ಲಿನ ಕಾಮಗಾರಿಗಳ ಬದಲಾವಣೆಯನ್ನು ಸಹ ಸಭೆ ಅನುಮೋದಿಸಿತು. |
| **ವಿಷಯ – 4** | ಮಂಡಳಿಯು 2017–18 ನೆ ಸಾಲಿನ ಮ್ಯಾಕ್ರೋ ಕ್ರಿಯಾ ಯೋಜನೆಯ ಅನುಮೋದನೆ:<br>ಅ) ಘನತೆವೆತ್ತ ರಾಜ್ಯಪಾಲರಿಂದ ವಲಯವಾರು ಮ್ಯಾಕ್ರೋ ಯೋಜನೆಗಳ ಅನುಮೋದನೆಯನ್ನು ಪಡೆದಿದೆ. ಆ) ಈಗ ಕಾಮಗಾರಿವಾರು ಕ್ರಿಯಾಯೋಜನೆಯ ಅನುಮೋದನೆಯನ್ನು ಪಡೆಯಬೇಕಾಗಿದೆ. ಈ ವಿಷಯದ ಕುರಿತು ಕೈಗೆತ್ತಿಕೊಂಡ ಕಾಮಗಾರಿಗಳು ಮಂಡಳಿ ಆದೇಶ 2013 ರ ಅವಶ್ಯಕತೆಗಳನ್ನು ಪೂರ್ತಿಗೊಳಿಸಿರಬೇಕು. ಈ ಆದೇಶದ ಪ್ರಕಾರ ಮಂಡಳಿಯು ವಿವಿಧ ಕ್ಷೇತ್ರಗಳಲ್ಲಿನ ಅಭಿವೃದ್ಧಿ ಮಟ್ಟವನ್ನು ಖಚಿತಪಡಿಸಿಕೊಂಡ ನಂತರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕು. after assessing the impact of various development efforts in removing backlog as well as in achieving overall development within HK region. ಕ್ರಿಯಾ ಯೋಜನೆಯು ಭಾರತ ಸರ್ಕಾರ ಹಾಗು ಕರ್ನಾಟಕ ಸರ್ಕಾರ ನಿಗದಿಪಡಿಸಿದ ಉದ್ದೇಶಗಳು ಹಾಗು ಆದ್ಯತೆಗಳನ್ನು ಪರಿಗಣಿಸಬೇಕು. ಹೈ.ಕ.ಪ್ರದೇಶದಲ್ಲಿ ಭಾರತ ಸರ್ಕಾರ ಹಾಗು ಕರ್ನಾಟಕ ಸರ್ಕಾರದ ವಿವಿಧ ಲಭ್ಯವಿರುವ ಏಜೆನ್ಸಿಗಳ ಹೂಡಿಕೆಗಳ ವಿಸ್ತಾರವನ್ನು ಗಣನಗೆ ತೆಗೆದುಕೊಳ್ಳಬೇಕು. ಐತಿಹಾಸಿಕ ಹಿಂದುಳಿಯುವಿಕೆಯನ್ನು ಹಲವಾರು ಕಾರ್ಯಕ್ರಮಗಳ ಮೂಲಕ ನಿಭಾಯಿಸಲು ಹೆಚ್ಚಿನ ಆದ್ಯತೆ ನೀಡಬೇಕು. ಹಿಂದೆ ಕೈಗೆತ್ತಿಕೊಂಡ ಕಾಮಗಾರಿಗಳನ್ನು ಗಮನಿಸಿದಾಗ ಇದನ್ನು ಅನುಸರಿಸದೆ ಇರುವುದು ಕಂಡುಬಂದಿದೆ. ಆದ್ದರಿಂದ ಹೈ.ಕ.ಪ್ರ.ಅ.ಮಂಡಳಿಯು ಸರಿಯಾದ ಕ್ರಮ ತೆಗದುಕೊಳ್ಳುವ ಅವಶ್ಯಕತೆ ಇದೆ. ಹೈ.ಕ.ಪ್ರದೇಶದ ಐತಿಹಾಸಿಕ ಹಿಂದುಳಿವಿಕೆಯನ್ನು ಹೋಗಲಾಡಿಸುವ ದೃಷ್ಟಿಯಿಂದ ದೀರ್ಘಾವಧಿಯ ದೃಷ್ಟಿಕೋನವುಳ್ಳ ಯೋಜನೆಗಳ ಕುರಿತು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಕಡೆ ಮಂಡಳಿಯು ಹೆಚ್ಚಿನ ದೃಷ್ಟಿ ಹರಿಸಬೇಕು. ಈ ಕುರಿತು ಕೆಳಗಿನವುಗಳನ್ನು ಪ್ರಸ್ತಾಪಿಸಲಾಗಿದೆ:<br>(i) ತ್ವರಿತ ಅನುಷ್ಠಾನಕ್ಕಾಗಿ ಹಾಗು ಮಂಡಳಿಯ 5 ವರ್ಷಗಳ ಯೋಜನೆಗಳನ್ನು ರೂಪಿಸಲು PWC ಅಥವಾ Dalloit ಮುಂತಾದ ಕನ್ಸಲ್ಟಂಟ್‌ರವರಿಗೆ ವಹಿಸಿಕೊಡಬಹುದು ಈ ಕುರಿತು ಕೆಟಿಪಿಪಿ ಕಾಯ್ದೆಯಡಿ ವಿನಾಯಿತಿ ಕೋರಿ ಸರ್ಕಾರಕ್ಕೆ ವಿನಂತಿಸಬಹುದು. |

| | |
|---|---|
| | (ii) ಪ್ರಸ್ತುತ ಸಾಲಿನ ಕಾಮಗಾರಿಗಳಿಗಾಗಿ ಸದರಿ ಯೋಜನೆಗಾಗಿ ಕಾಯಲು ಆಗುವುದಿಲ್ಲ, ಸಾಧ್ಯವಾದಷ್ಟು ಕೆಳಕಂಡ ಮಾರ್ಗದರ್ಶಿ ತತ್ವಗಳನ್ನು ಅನುಸರಿಸಬಹುದು.<br>ಅ) ಆಡಳಿತ ಇಲಾಖೆಗಳ ಮುಖ್ಯಸ್ಥರು / ಕಾರ್ಯದರ್ಶಿಗಳ ಜೊತೆ ಚರ್ಚೆಯ ನಂತರ ಪ್ರತಿ ವಲಯದ ಸ್ಪಷ್ಟವಾಗಿ ಗುರುತಿಸಬಹುದಾದ ಯೋಜನೆಗಳನ್ನು ಆಯ್ಕೆ ಮಾಡಬೇಕು.<br>ಆ) Only major works which demonstrate a visible impact should be taken up. ಪ್ರಮುಖ ಕಾಮಗಾರಿಗಳನ್ನು ಹೊರತುಪಡಿಸಿ ಭಾರತ ಸರ್ಕಾರ ಅಥವಾ ಕರ್ನಾಟಕ ಸರ್ಕಾರದ ಯೋಜನೆಗಳ ಮಾರ್ಗಸೂಚಿಗಳ ಆಧಾರದ ಮೇಲೆ ತೆಗೆದುಕೊಳ್ಳಬೇಕು.<br>ಇ) ವಿವೇಚನೆಯ ಆಧಾರದ ಬದಲಿಗೆ ಮಾರ್ಗಸೂಚಿಗಳಂತೆ ಕಾಮಗಾರಿಗಳನ್ನು ಆಯ್ಕೆ ಮಾಡಬೇಕು.<br>ಈ) ಕಾಮಗಾರಿಗಳ ವರ್ಗೀಕರಣವನ್ನು ಮೂಲಭೂತ ಸೌಕರ್ಯ & ಸಾಂಸ್ಥಿಕ ಶೀರ್ಷಿಕೆ (70:30 ಅನುಪಾತದಲ್ಲಿ) ಮಾಡಿರುವುದನ್ನು ಅರ್ಥಪೂರ್ಣವಾಗಿ, ಬಂಡವಾಳ ಮತ್ತು ಕಂದಾಯ (ರೆವಿನ್ಯೂ) ಶೀರ್ಷಿಕೆಗಳೆಂದು ಮಾಡಬಹುದು. ಐತಿಹಾಸಿಕ ಅಸಮತೋಲನವನ್ನು ಹೋಗಲಾಡಿಸಲು ಹೊಸ ಪ್ರೌಢಶಾಲೆಗಳು, ಪಿಯು ಕಾಲೇಜು, ಪದವಿ ಕಾಲೇಜು, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆಗಳ ಪ್ರಸ್ತಾಪಿಸುವಿಕೆಯ ಅಧಿಕಾರವನ್ನು ಮಂಡಳಿ ಹೊಂದಿದೆ. ಇದೆ ಕಾರ್ಯವನ್ನು ಇಲ್ಲಿಯವರೆಗೆ ಮಾಡಿದ್ದು, ಮಂಡಳಿ ಈ ಕುರಿತು ಸೂಕ್ತ ಶಿಫಾರಸ್ಸು ಮಾಡುವ ಅವಶ್ಯಕತೆ ಇದೆ. ಮಂಡಳಿಯು ಹೊಸದಾಗಿ ಪ್ರಸ್ತಾಪಿಸಲ್ಪಡುವ ಸಂಸ್ಥೆಗಳಿಗಾಗಿ ಮಂಡಳಿ ಅನುದಾನದಲ್ಲಿ ಪ್ರಾರಂಭಿಕ 3 ವರ್ಷಗಳಿಗೆ ಕಂದಾಯ ಖರ್ಚನ್ನು ಒದಗಿಸಬಹುದು, ನಂತರ ರಾಜ್ಯ ಸರ್ಕಾರದ ನಿಯತಕಾಲಿಕ ಅನುದಾನವನ್ನು ಒದಗಿಸಬಹುದು.<br>(iii) ಈ ಮಾರ್ಗದರ್ಶಿ ತತ್ವಗಳ ಆಧಾರದ ಮೇಲೆ ಅನುಬಂಧ – 3 ರಲ್ಲಿ ಸೂಚಿಸಿದ ಯೋಜನೆಗಳನ್ನು ಕೈಗೆತ್ತಿಕೊಳ್ಳಬಹುದು. |
| ಚರ್ಚೆ | ಕಾರ್ಯದರ್ಶಿಗಳು, ಹೈ.ಕ.ಪ್ರ.ಅ.ಮಂಡಳಿ, ಕಲಬುರಗಿ ಇವರು ವಿಷಯದ ಕುರಿತು ವಿವರವಾಗಿ ಸಭೆಯಲ್ಲಿ ಮಂಡಿಸಿದರು:<br>ವಿಷಯ ಸೂಚಿಗಳಲ್ಲಿ ಮಂಡಿಸಿದ ವಿಷಯಕ್ಕೆ ಅನುಮತಿಯನ್ನು ಸೂಚಿಸುತ್ತಾ, ಪ್ರಸ್ತುತ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಬದಲಾವಣೆ ಮಾಡದಿರುವಂತೆ ಚರ್ಚಿಸಲಾಯಿತು. ಅದಲ್ಲದೆ ಪ್ರಸ್ತುತ ಸಾಲಿನಲ್ಲಿ ಕಡಿಮೆ ಸಮಯ ಬಾಕಿ ಉಳಿದಿರುವುದರಿಂದ ಈಗಾಗಲೆ ಮೈಕ್ರೋ ಯೋಜನೆಯಡಿಯಲ್ಲಿ ಪ್ರಸ್ತಾವನೆ ಮಾಡಿರುವ ಕಾಮಗಾರಿಗಳು ಯಾವುದೇ ಬದಲಾವಣೆ ಮಾಡದೆ ಅನುಮೋದಿಸುವಂತೆಯೂ ಚರ್ಚಿಸಲಾಯಿತು. ಮ್ಯಾಕ್ರೋ ವರ್ಗದ ಕ್ರಿಯಾ ಯೋಜನೆಯ ಕಾಮಗಾರಿಗಳು ಸಂಬಂಧಿತ ಜಿಲ್ಲಾ ಸಚಿವರೊಂದಿಗೆ ಚರ್ಚಿಸಿ ಸನ್ಮಾನ್ಯ ಅಧ್ಯಕ್ಷರು, ಹೈ.ಕ.ಪ್ರ.ಅ.ಮಂಡಳಿ ಹಾಗು ಕಾರ್ಯದರ್ಶಿಗಳು, ಹೈ.ಕ.ಪ್ರ.ಅ.ಮಂಡಳಿ ರವರು ಅಂತಿಮಗೊಳಿಸುವಂತೆ ಸೂಚಿಸಲಾಯಿತು.<br>ಮಾನ್ಯ ಅಧ್ಯಕ್ಷರು ಹೈ.ಕ.ಪ್ರ.ಅ.ಮಂಡಳಿ ಇವರು ಮಂಡಳಿಯು ಪ್ರೌಢಶಾಲೆಗಳು, ಪಿಯು ಕಾಲೇಜು, ಪದವಿ ಕಾಲೇಜು, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆಗಳ ಪ್ರಸ್ತಾವನೆಯನ್ನು ಸಲ್ಲಿಸುವ ಅಧಿಕಾರವನ್ನು ಹೊಂದಿರುವುದಾಗಿ ಮಂಡಿಸಿದರು. ಮಂಡಳಿಯು 80 ಕ್ಕೂ ಹೆಚ್ಚಿನ ವಿದ್ಯಾರ್ಥಿಗಳುಳ್ಳ ಹಾಗು ಪ್ರದೇಶದ ಜನರ ಬೇಡಿಕೆಗೆ ಅನುಗುಣವಾಗಿ 50 ರಿಂದ 60 ಪ್ರೌಢಶಾಲೆಗಳನ್ನು ಸ್ಥಾಪಿಸಬಹುದು. ಪ್ರಾರಂಭಿಕ 3 ವರ್ಷಗಳವರೆಗೆ ಮಂಡಳಿಯ ಅನುದಾನದಿಂದ ಕಂದಾಯ ಖರ್ಚನ್ನು ಒದಗಿಸಬಹುದು ನಂತರ ರಾಜ್ಯ ಸರ್ಕಾರದ ಅನುದಾನವನ್ನು ಉಪಯೋಗಿಸಬೇಕು. ಮಾನ್ಯ ಬಸವರಾಜ ರಾಯರೆಡ್ಡಿ , ಉನ್ನತ ಶಿಕ್ಷಣ ಸಚಿವರು ಇವರು 10 ಹೊಸ ವಸತಿಸಹಿತ ಪ್ರೌಢಶಾಲೆಗಳಿಗಾಗಿ ಪ್ರಸ್ತಾವನೆ ಸರ್ಕಾರ ಮಾಡಿದ್ದು, ಅವುಗಳಲ್ಲಿ 5 ಪ್ರೌಢಶಾಲೆಗಳು ಹೈ.ಕ.ಪ್ರದೇಶಕ್ಕೆ ಮಂಜೂರಾಗಲಿವೆ ಅಲ್ಲದೆ ಕಳೆದ 5 ವರ್ಷಗಳಿಂದ ರಾಜ್ಯದಲ್ಲಿ ಯಾವುದೇ ಹೊಸ ಶಾಲೆಗಳು ಸ್ಥಾಪನೆಯಾಗಿರುವುದಿಲ್ಲ ಎಂದು ವಿವರಿಸಿದರು. ಮಾನ್ಯ ಶ್ರೀ ಅಶೋಕ ಖೇಣಿ, ವಿಧಾನ ಸಭಾ ಸದಸ್ಯರು, ಬೀದರ್ (ದಕ್ಷಿಣ) ಇವರು ಜನರ ಬೇಡಿಕೆ ಆಧಾರದ ಮೇಲೆ ಪ್ರತಿ ಕ್ಷೇತ್ರಕ್ಕೆ 2 ಶಾಲೆಗಳು ಹಂಚಿಕೆಯಾಗಬೇಕು ಎಂದು ಅಭಿಪ್ರಾಯಪಟ್ಟರು. ಮಾನ್ಯ ಶ್ರೀ ಈಶ್ವರ ಖಂಡ್ರೆ, ವಿಧಾನ ಸಭಾ ಸದಸ್ಯರು, ಭಾಲ್ಕಿ ಹಾಗು ಮಾನ್ಯ ಪೌರಾಡಳಿತ ಸ್ಥಳೀಯ ಸಂಸ್ಥೆಗಳ ಸಚಿವರು ಇವರು ಹೊಸ ಪ್ರೌಢಶಾಲೆಗಳ ಸ್ಥಾಪನೆಯ ಪ್ರಸ್ತಾವನೆಯನ್ನು ಮಂಡಳಿ ಸಭೆಯಲ್ಲಿ ಅನುಮೋದಿಸಿ, 15 ದಿನಗಳೊಳಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದಲ್ಲಿ, ಘನತೆವೆತ್ತ ರಾಜ್ಯಪಾಲರೊಂದಿಗೆ ಚರ್ಚಿಸಿ ಕ್ಯಾಬಿನೇಟ ಮೀಟಿಂಗನಲ್ಲಿ ನಿರ್ಣಯವನ್ನು ತೆಗೆದುಕೊಳ್ಳಬಹುದು ಎಂದು ಅಭಿಪ್ರಾಯಪಟ್ಟರು. ಮಂಡಳಿಯ ಎಲ್ಲಾ ಸದಸ್ಯರು ಚರ್ಚೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡರು ಹಾಗು ಪ್ರೌಢಶಾಲೆಗಳನ್ನು ಈ ವರ್ಷದಲ್ಲಿಯೇ ಪ್ರಾರಂಭಿಸಬೇಕೆಂದು ಕೇಳಿಕೊಂಡರು.<br>ಅಲ್ಲದೆ ಕಾರ್ಯದರ್ಶಿಗಳು ವಿವಿಧ ಆಡಳಿತ ಇಲಾಖೆಗಳು ಕ್ರಿಯಾ ಯೋಜನೆ ತಯಾರಿಸುವಲ್ಲಿ ಅವರ ಕೊಡುಗೆಗಳ ಕುರಿತು ಸಭೆಯಲ್ಲಿ ಮಂಡಿಸಿದರು. ಈ ದಿಸೆಯಲ್ಲಿ ಜಿಲ್ಲಾಧಿಕಾರಿಗಳು / ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ತ್ರೈಮಾಸಿಕ ಸಮ್ಮೇಳನವನ್ನು ಸಂಬಂಧಿತ ಆಡಳಿತ ಇಲಾಖೆಗಳ ಮುಖ್ಯಸ್ಥರೊಂದಿಗೆ ನಡೆಸುವಂತೆಯೂ ಚರ್ಚಿಸಲಾಯಿತು. ಮುಂದೆ, ವಿವಿಧ ಆಡಳಿತ ಇಲಾಖೆಗಳು ಮುಂಬರುವ ವರ್ಷದ ಕ್ರಿಯಾ ಯೋಜನೆ ಸನ್ಮಾನ್ಯ ಅಧ್ಯಕ್ಷರು, ಹೈ.ಕ.ಪ್ರ.ಅ.ಮಂಡಳಿ |

| | |
|---|---|
| | ಹಾಗೂ ಕಾರ್ಯದರ್ಶಿಗಳು ಹೈ.ಕ.ಪ್ರ.ಅ.ಮಂಡಳಿ ಅಂತಿಮಗೊಳಿಸುವ ಮುಂಚಿತವಾಗಿ ತಯಾರಿಸಲು ತಮ್ಮ ಬೇಡಿಕೆಗಳನ್ನು ಪ್ರಸ್ತಾಪಿಸುವಂತೆ ಸೂಚಿಸಲಾಯಿತು. |
| ನಿರ್ಣಯ | **ವಿವರವಾದ ಚರ್ಚೆಯ ನಂತರ ಕೆಳಕಾಣಿಸಿದ ನಿರ್ಣಯಗಳನ್ನು ಕೈಗೊಳ್ಳಲಾಯಿತು.**<br>1. ವಿಷಯ ಸೂಚಿಯಲ್ಲಿ ಮಂಡಿಸಿದ ಪ್ರಸ್ತಾವನೆಗಳನ್ನು ಅನುಬಂಧ – 3 ರಲ್ಲಿ ಮಂಡಿಸಿದ ಯೋಜನೆಗಳ ಗುಚ್ಛಗಳೊಂದಿಗೆ ಸಭೆಯಲ್ಲಿ ಅನುಮೋದಿಸಲಾಯಿತು.<br>2. ವಿಷಯಸೂಚಿಯಲ್ಲಿ ಪ್ರಸ್ತಾವನೆ ಮಾಡಿದ ಗುರಿಗಳನ್ನು ಕ್ರಿಯಾಯೋಜನೆಯಲ್ಲಿ ಅಳವಡಿಸಲು ಪ್ರಸ್ತುತ ಸಾಲಿನಲ್ಲಿ ಸಮಯದ ಕೊರತೆ ಇರುವುದರಿಂದ ಈಗಾಗಲೆ ಮಂಡಿಸಿದ ಕ್ರಿಯಾಯೋಜನೆಯನ್ನು ಅನುಮೋದಿಸುವುದು. ಆದಾಗ್ಯೂ ಸಹ ಕೆಲವೊಂದು ತಿದ್ದುಪಡಿಗಳನ್ನು ಪ್ರಸ್ತುತ ವರ್ಷದ ಪ್ರಸ್ತಾವನೆಗಳಲ್ಲಿಯೂ ಸಹ ಅವಶ್ಯಕವಾದ ಸಂದರ್ಭದಲ್ಲಿ ಮಾಡಬಹುದಾಗಿದೆ ಎಂದು ನಿರ್ಣಯಿಸಲಾಯಿತು. ಮುಂದಿನ ವರ್ಷದಲ್ಲಿ ವಿಷಯಸೂಚಿಯಲ್ಲಿ ಮಂಡಿಸಿದ ಅಂಶಗಳ ಮೇರೆಗೆ ಕಾಮಗಾರಿಗಳನ್ನು ಅನುಮೋದಿಸುವಂತೆ ನಿರ್ಣಯ ಕೈಗೊಳ್ಳಲಾಯಿತು. ಈ ಹಿನ್ನೆಲೆಯಲ್ಲಿ ಪ್ರಸ್ತುತ ವರ್ಷದ ಮ್ಯಾಕ್ರೋ ವರ್ಗದ ಕಾಮಗಾರಿಗಳನ್ನು ಜಿಲ್ಲಾಧಿಕಾರಿಗಳಿಂದ ಬಂದಂತಹ ಪ್ರಸ್ತಾವನೆಗಳನ್ನು ತೆಗೆದುಕೊಳ್ಳಬಹುದಾಗಿದೆ ಎಂದು ಸೂಚಿಸಲಾಯಿತು. ಸಾಧ್ಯವಾದಷ್ಟು ಮಟ್ಟಿಗೆ ಮ್ಯಾಕ್ರೋ ವರ್ಗದ ಕಾಮಗಾರಿಗಳನ್ನು ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಚರ್ಚಿಸಿ ವಿಷಯಸೂಚಿಯಲ್ಲಿ ಮಂಡಿಸಿದ ಮಾರ್ಗಸೂಚಿಗಳ ಆಧಾರದ ಮೇಲೆ ತೆಗೆದುಕೊಳ್ಳುವಂತೆಯೂ ನಿರ್ಣಯಿಸಲಾಯಿತು.<br>3. ನಗರ ವರ್ತುಲ ರಸ್ತೆಗಳ ನಿರ್ಮಾಣ ಹಾಗು ನಗರಗಳಲ್ಲಿರುವ ರಸ್ತೆಗಳ ಅಗಲೀಕರಣ ಕಾಮಗಾರಿಗಳನ್ನು ಸಾರ್ವಜನಿಕರ ಪಾಲ್ಗೊಳ್ಳುವಿಕೆಯು ವರ್ತುಲ ರಸ್ತೆಗಳ ಮಧ್ಯೆ ಬರುವ ತಮ್ಮ ಭೂಮಿಯನ್ನು ಸ್ವಇಚ್ಛೆಯಿಂದ ಹಸ್ತಾಂತರಿಸುವದು ಹಾಗೂ ನಗರಗಳಲ್ಲಿ ರಸ್ತೆಗಳ ಅಗಲೀಕರಣದಲ್ಲಿ ತಡೆಯುಂಟುಮಾಡುವ ಕಟ್ಟಡ ಹಾಗು ಇತರ ಸ್ಥಿರಾಸ್ತಿಯನ್ನು ಸ್ವ ಇಚ್ಛೆಯಿಂದ ಜಿಲ್ಲಾಡಳಿತಕ್ಕೆ ಹಸ್ತಾಂತರಿಸುವುದಾಗಿದೆ. ನಗರ ಸ್ಥಳೀಯ ಸಂಸ್ಥೆಗಳು, (TPS) ನಗರ ಯೋಜನೆಯ ಸ್ಕೀಮಗಳು ಹಾಗು ಅವಕಾಶಗಳು ಮತ್ತು TDRs ಗಳನ್ನು ಬಳಸಿಕೊಳ್ಳಲು ಸ್ವಾತಂತ್ರತೆಯನ್ನು ಹೊಂದಿರುತ್ತವೆ. ಈ ಯೋಜನೆಗಳನ್ನು ಮಿಷನ್ ಮೋಡ್ (Mission mode) ರೀತಿಯಲ್ಲಿ ಮತ್ತು ಇಂತಹ ಕಾಮಗಾರಿಗಳಿಗೆ ಯಾವುದೆ ಹಣಕಾಸಿನ ನಿರ್ಭಂದನೆಗಳನ್ನು ಇಲ್ಲದಂತೆ ತೆಗೆದುಕೊಳ್ಳುವಂತೆಯೂ ಕೂಡ ನಿರ್ಣಯಿಸಲಾಯಿತು.<br>4. ಹೈದ್ರಾಬಾದ್ ಕರ್ನಾಟಕ ಪ್ರದೇಶದ ವ್ಯಾಪ್ತಿಯಲ್ಲಿ 50 – 60 ಹೈಸ್ಕೂಲ್‌ಗಳು / ಪಿ.ಯು ಕಾಲೇಜುಗಳನ್ನು ಸ್ಥಾಪಿಸಲು ನಿರ್ಧರಿಸಲಾಯಿತು. ಪ್ರಥಮ 3 ವರ್ಷಗಳ ಅವಧಿಗೆ ಕಂದಾಯ ಖರ್ಚುಗಳನ್ನು ಮಂಡಳಿ ನಿಧಿಯಿಂದ ಭರಿಸುವಂತೆ ನಿರ್ಣಯಿಸಲಾಯಿತು. ಹೊಸದಾಗಿ ಪ್ರಾರಂಭಿಸಲು ಉದ್ದೇಶಿಸಲಾದ ಹೈಸ್ಕೂಲ್‌ಗಳನ್ನು ಅವಶ್ಯಕತೆಗೆ ಅನುಸಾರವಾಗಿ ಪ್ರಾರಂಭಿಸಲು ನಿರ್ಣಯಿಸಲಾಯಿತು. 3 ವರ್ಷಗಳ ತರುವಾಯ ಕಂದಾಯ ಖರ್ಚನ್ನು ಸರ್ಕಾರಕ್ಕೆ ವರ್ಗಾವಣೆ ಮಾಡಲು ನಿರ್ಣಯಿಸಲಾಯಿತು. ಯಾವ ಸ್ಥಳಗಳಲ್ಲಿ ಕಟ್ಟಡಗಳು ಇಲ್ಲವೋ ಅಂತಹ ಸ್ಥಳಗಳಲ್ಲಿ ಮಂಡಳಿಯಿಂದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ನಿರ್ಣಯಿಸಲಾಯಿತು.<br>5. ಹೆಚ್.ಕೆ.ಆರ್.ಡಿ.ಬಿಯಿಂದ ಅನುಷ್ಠಾನಗೊತ್ತಿರುವ ಕಾಮಗಾರಿಗಳ ವರ್ಗೀಕರಣವನ್ನು ಮೂಲಭೂತ ಸೌಕರ್ಯ (70%) ಹಾಗು ಸಾಂಸ್ಥಿಕ ಶೀರ್ಷಿಕೆ ಬದಲಾಗಿ ಬಂಡವಾಳ (70%) ಮತ್ತು ಕಂದಾಯ (30%) ಎಂದು ಅರ್ಥಪೂರ್ಣವಾಗಿ ವರ್ಗೀಕರಿಸಬಹುದಾಗಿದೆ. ಮುಂದುವರೆದು ಕಂದಾಯ ಶೀರ್ಷಿಕೆಗೆ 30% ವೆಚ್ಚವನ್ನು ನಿಗದಿಗೊಳಿಸಬಹುದಾಗಿದೆ. 30% ಕ್ಕೆ ಕಡಿಮೆ ಬೀಳುವ ಉಳಿದ ಮೊತ್ತವನ್ನು ಬಂಡವಾಳ ಲೆಕ್ಕಶೀರ್ಷಿಕೆಯಿಂದ ಭರಿಸಬಹುದಾಗಿದೆ ಎಂದು ನಿರ್ಣಯಿಸಲಾಯಿತು.<br>6. ಜಿಲ್ಲಾಧಿಕಾರಿಗಳು / ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಇವರೊಂದಿಗೆ ನಡೆಸಲು ಉದ್ದೇಶಿಸಿದ ತ್ರೈಮಾಸಿಕ ಸಮ್ಮೇಳನಕ್ಕೆ ಕಡ್ಡಾಯವಾಗಿ ಇಲಾಖಾ ಮುಖ್ಯಸ್ಥರು / ಸರ್ಕಾರದ ಕಾರ್ಯದರ್ಶಿಗಳು ಹಾಜರಿರುವಂತೆ ಸೂಚನೆ ನೀಡುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು.<br>7. ಆಡಳಿತ ಇಲಾಖಾ ಮುಖ್ಯಸ್ಥರು / ಸರ್ಕಾರದ ಕಾರ್ಯದರ್ಶಿಗಳು ಇವರಿಂದ ಬಂದಂತಹ ಪ್ರಸ್ತಾವನೆಗಳನ್ನು ಹೆಚ್.ಕೆ.ಆರ್.ಡಿ.ಬಿಯ ಕ್ರಿಯಾ ಯೋಜನೆಯಲ್ಲಿ ಅಳವಡಿಸುವಂತೆ ನಿರ್ಣಯಿಸಲಾಯಿತು. ಸದರಿ ಉದ್ದೇಶಕ್ಕಾಗಿ ಸರ್ಕಾರವು ಸೂಕ್ತ ವ್ಯವಸ್ಥೆಯನ್ನು ಕಲ್ಪಿಸುವಂತೆ ವಿನಂತಿಸುವಂತೆ ಮತ್ತು ಅಧ್ಯಕ್ಷರು / ಕಾರ್ಯದರ್ಶಿಗಳು ಹೆಚ್.ಕೆ.ಆರ್.ಡಿ.ಬಿ ಇವರಿಗೆ ಪ್ರಸ್ತಾವನೆಗಳನ್ನು ಸಲ್ಲಿಸುವಂತೆ ತಿಳಿಸಲಾಯಿತು. ಪ್ರತಿ ವರ್ಷ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳ ಮಧ್ಯದಲ್ಲಿ ಮುಂದಿನ ವರ್ಷದ ಕ್ರಿಯಾ ಯೋಜನೆ ರಚನೆಗೆ ಮುಂಚಿತವಾಗಿ ಪ್ರಸ್ತಾವನೆಗಳನ್ನು ಮಾಡುವಂತೆ ನಿರ್ಣಯಿಸಲಾಯಿತು. ಸದರಿ ವಿಷಯದ ಕುರಿತು ಸಮ್ಮೇಳನವನ್ನು ಬೆಂಗಳೂರಿನಲ್ಲಿ ಹಮ್ಮಿಕೊಳ್ಳುವಂತೆ ನಿರ್ಣಯಿಸಲಾಯಿತು. |
| **ವಿಷಯ – 5** | ಇದೇ ರೀತಿಯಲ್ಲಿ ಮೈಕ್ರೋ ಕ್ರಿಯಾ ಯೋಜನೆಯನ್ನು ಸಹ ಅನುಮೋದಿಸಬೇಕು. ಮಂಡಳಿ ಆದೇಶ 2013 ರಲ್ಲಿ ಮೈಕ್ರೋ ಮತ್ತು ಮ್ಯಾಕ್ರೋ ಕಾಮಗಾರಿಗಳ ಅನುಮೋದನೆಯಲ್ಲಿ ಯಾವುದೆ ವ್ಯತ್ಯಾಸವನ್ನು ನಿಗದಿಪಡಿಸಿರುವುದಿಲ್ಲ. ನೈಜವಾಗಿ ಸದರಿ ಆದೇಶದಲ್ಲಿ ಸಣ್ಣ ಅಥವಾ ದೊಡ್ಡ ಕಾಮಗಾರಿ ಎಂದು |

| | |
|---|---|
| | ಪ್ರತ್ಯೇಕಿಸಿರುವುದಿಲ್ಲ. |
| ಚರ್ಚೆ | ಮಂಡಳಿ ಸಭೆಯಲ್ಲಿ ಮೇಲ್ಕಾಣಿಸಿದಂತೆ ಚರ್ಚಿಸಲಾಯಿತು. |
| ನಿರ್ಣಯ | ಚರ್ಚೆಯಲ್ಲಿ ಮೇಲ್ಕಾಣಿಸಿದಂತೆ ನಿರ್ಣಯಿಸಲಾಯಿತು. |
| **ವಿಷಯ – 6** | ಮಂಡಳಿ ಆದೇಶ 2013 ಹೈ.ಕ.ಪ್ರದೇಶಕ್ಕಾಗಿ ವಿಶೇಷ ಕೈಗಾರಿಕೆ ನೀತಿಯನ್ನು ಒದಗಿಸುತ್ತಿದ್ದು, ಅದು ಟ್ಯಾಕ್ಸ್ ಹಾಲಿಡೇಸ್‌ನಂತಹ ಅವಕಾಶವನ್ನು ಕಲ್ಪಿಸಲಿದೆ. ಕೈಗಾರಿಕಾ ಇಲಾಖೆಯೊಂದಿಗೆ ಚರ್ಚೆಯ ಮೂಲಕ ಸದರಿ ನೀತಿಯ ಅಭಿವೃದ್ಧಿಯಾಗಬೇಕಾಗಿದೆ. ತದನಂತರ ಇದನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದು. ಪ್ರಾರಂಭಿಕ 2–3 ವರ್ಷಗಳವರೆಗೆ ಸದರಿ ನೀತಿಗೆ ಒಳಪಡುವ ಕೈಗಾರಿಕೆಗಳ ಉದ್ಯೋಗಿಗಳಿಗೆ ಸಂಬಳ ನೀಡುವ ಸೌಕರ್ಯವನ್ನು ಸದರಿ ನೀತಿಯು ಹೊಂದಿದೆ. |
| ಚರ್ಚೆ | ಕಾರ್ಯದರ್ಶಿಗಳು, ಹೈ.ಕ.ಪ್ರ.ಅ.ಮಂಡಳಿ ಇವರು ವಿಶೇಷ ಕೈಗಾರಿಕಾ ನೀತಿಯನ್ನು ರೂಪಿಸಬೇಕಾದರೆ ಕೈಗಾರಿಕಾ ಇಲಾಖೆಗಳೊಂದಿಗೆ ಚರ್ಚಿಸಿ ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ಪ್ರತ್ಯೇಕವಾದ ನೀತಿಯನ್ನು ರೂಪಿಸಬೇಕಾಗುತ್ತದೆ ಎಂದು ಸಭೆಯಲ್ಲಿ ಮಂಡಿಸಿದರು ಹಾಗು ಮಂಡಳಿಯು ಹೈ.ಕ.ಪ್ರದೇಶದಲ್ಲಿ ಹೊಸ ಕೈಗಾರಿಕೆಗಳನ್ನು ಸ್ಥಾಪಿಸುವವರಿಗೆ ಟ್ಯಾಕ್ಸ್ ಹಾಲಿಡೇಸನ್ನು ಅಳವಡಿಸಿಕೊಳ್ಳಲು ಸೂಚಿಸಬಹುದು. ಮಾನ್ಯ ಅಧ್ಯಕ್ಷರು, ಹೈ.ಕ.ಪ್ರ.ಅ. ಮಂಡಳಿ, ಕಲಬುರಗಿ ಇವರು ಈಗಾಗಲೆ ಸದರಿ ನೀತಿಯ ಕುರಿತು ಪ್ರಧಾನ ಕಾರ್ಯದರ್ಶಿ ಯೋಜನೆ/ ಕೈಗಾರಿಕೆ /ಆರ್‌ಡಿಪಿಆರ್ ಜೊತೆಗೆ ಚರ್ಚಿಸಲಾಗಿದೆ ಹಾಗು ಹೈ.ಕ.ಪ್ರದೇಶದಲ್ಲಿ ಹೊಸ ಕೈಗಾರಿಕೆಗಳ ಸ್ಥಾಪನೆಗಾಗಿ ಆಕರ್ಷಿಸಲು ಕೈಗಾರಿಕಾ ನೀತಿಯನ್ನು ರಚಿಸಲಾಗುವುದು ಮತ್ತು ಸರ್ಕಾರಕ್ಕೆ ಈ ಕುರಿತು ಶಿಫಾರಸ್ಸು ಮಾಡಲಾಗುವುದು. |
| ನಿರ್ಣಯ | ಟ್ಯಾಕ್ಸ್ ಹಾಲಿಡೇಸನ್ನು ಒದಗಿಸಿ ಹೊಸ ಕೈಗಾರಿಕಾ ನೀತಿಯನ್ನು ರಚಿಸಬಹುದು ಹಾಗೂ ಹೈ.ಕ.ಪ್ರದೇಶದಲ್ಲಿ ಹೊಸ ಕೈಗಾರಿಕೆಗಳನ್ನು ಸ್ಥಾಪಿಸುವವರನ್ನು ಆಕರ್ಷಿಸಲು ಪ್ರಾರಂಭಿಕ 2–3 ವರ್ಷಗಳವರೆಗೆ ಅಪ್ಪಾರೆಲ್ ಇಂಡಸ್ಟ್ರೀಸ್ ನಂತಹ ಕೈಗಾರಿಕೆಗಳ ಉದ್ಯೋಗಿಗಳಿಗೆ ಸಂಬಳ ನೀಡುವ ಸೌಕರ್ಯವನ್ನು ಒದಗಿಸಬಹುದು ಎಂದು ಚರ್ಚಿಸಲಾಯಿತು. |
| **ವಿಷಯ – 7** | ಮಂಡಳಿ ಆದೇಶದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ದೇಣಿಗೆ ರೂಪದಲ್ಲಿ ನೀಡಲು ಹೈ.ಕ.ಪ್ರದೇಶಕ್ಕೆ ನೀತಿಯನ್ನು ಜಾರಿಗೆ ತರುವ ಅವಕಾಶವನ್ನು ಕಲ್ಪಿಸಿದೆ. ಪ್ರಖ್ಯಾತ ಶಿಕ್ಷಣ ಸಂಸ್ಥೆಗಳನ್ನು ಹೈ.ಕ.ಪ್ರದೇಶದ ಕಡೆ ಆಕರ್ಷಿಸಲು ಕಟ್ಟಡ ಅಥವಾ ನಿವೇಶನಗಳನ್ನು ಮೂಲಭೂತ ಸೌಕರ್ಯ ಅನುದಾನ ರೂಪದಲ್ಲಿ ನೀಡಬಹುದು. |
| ಚರ್ಚೆ | ಮಾನ್ಯ ಅಧ್ಯಕ್ಷರು, ಹೈ.ಕ.ಪ್ರ.ಅ.ಮಂಡಳಿ, ಕಲಬುರಗಿ ಇವರು ಶೈಕ್ಷಣಿಕ ವಲಯವು ಮಂಡಳಿಯ ಆದ್ಯತೆಯ ವಲಯವಾಗಿದೆ ಎಂದು ವಿವರಿಸಿದರು. ಅವಶ್ಯಕ ನಿರ್ಧಾರಗಳನ್ನು ತೆಗೆದುಕೊಳ್ಳುವುದರ ಮೂಲಕ ಶಿಕ್ಷಣ ಮಟ್ಟವನ್ನು ಸುಧಾರಿಸಬಹುದು. ಎಸ್.ಎಸ್.ಎಲ್.ಸಿ ಹಾಗು ಪಿ.ಯು.ಸಿ ಫಲಿತಾಂಶಗಳು ಹೈದ್ರಾಬಾದ್ ಕರ್ನಾಟಕ ಪ್ರದೇಶದ ಶಾಲೆಗಳ ಹಾಗು ವಿದ್ಯಾರ್ಥಿಗಳ ಕಳಪೆ ಪ್ರದರ್ಶನಕ್ಕೆ ಸಾಕ್ಷಿಯಾಗಿದೆ ಎಂದು ಅಭಿಪ್ರಾಯಿಸಿದರು. ಮಾನ್ಯ ಅಧ್ಯಕ್ಷರು, ಹೈ.ಕ.ಪ್ರ.ಅ.ಮಂಡಳಿ ಇವರು ಹೈ.ಕ.ಪ್ರದೇಶದ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸಲು ದೆಹಲಿ ಪಬ್ಲಿಕ್ ಸ್ಕೂಲ್, ವಿದ್ಯಾನಿಕೇತನ, ಆಳ್ವಾಸ್ ಶಿಕ್ಷಣ ಸಂಸ್ಥೆ ಮುಂತಾದ ಗುಣಮಟ್ಟದ ಶಿಕ್ಷಣ ಸಂಸ್ಥೆಗಳಿಗೆ ಅವುಗಳ ಶಾಖೆಗಳನ್ನು ಈ ಭಾಗದಲ್ಲಿ ಪ್ರಾರಂಭಿಸುವಂತೆ ಉತ್ತೇಜಿಸಲು ಪ್ರೋತ್ಸಾಹ ಧನವನ್ನು ನೀಡಬಹುದು. ಈ ಕುರಿತು ಮೂಲಭೂತ ಸೌಕರ್ಯ ರೂಪದಲ್ಲಿ ಕಟ್ಟಡ ಅಥವಾ ನಿವೇಶನವನ್ನು ಒಂದು ಬಾರಿ ಪ್ರಾರಂಭಿಕ ಪ್ರೋತ್ಸಾಹವೆಂದು ನೀಡಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. |
| ನಿರ್ಣಯ | ವಿವರವಾದ ಚರ್ಚೆಯ ನಂತರ ಮಂಡಳಿಯು ಸದರಿ ಪ್ರಸ್ತಾವನೆಗಳಿಗೆ ಒಪ್ಪಿಗೆಯನ್ನು ಸೂಚಿಸಿತು. |
| **ವಿಷಯ – 8** | ಹೆಚ್.ಕೆ.ಆರ್.ಡಿ.ಬಿ ಆದೇಶದಲ್ಲಿ ಶಿಕ್ಷಣ ಸಂಸ್ಥೆಗಳಿಗಾಗಿ ವಿಶೇಷ ಅನುದಾನದ ನೀತಿಯನ್ನು ಇರುವುದಾಗಿ ಪ್ರಸ್ತಾಪಿಸಲಾಯಿತು. ಹೈ.ಕ.ಪ್ರದೇಶದಲ್ಲಿನ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳು ಹಾಗು ನಿಗದಿತ ಅಂಕಕ್ಕಿಂತ ಹೆಚ್ಚಿನ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಅವರು ಪಾವತಿಸಿದ ಶುಲ್ಕವನ್ನು ಮರಳಿಸುವ ಸೌಕರ್ಯವನ್ನು ಒದಗಿಸಲು ಅನುದಾನವನ್ನು ಒದಗಿಸಬಹುದು. |
| ಚರ್ಚೆ | ಸದರಿ ವಿಷಯದ ಕುರಿತು ಸಭೆಯಲ್ಲಿ ವಿವರವಾಗಿ ಚರ್ಚೆಯಾಗಿಲ್ಲ. |
| ನಿರ್ಣಯ | ಸದರಿ ವಿಷಯದ ಕುರಿತು ಸೂಕ್ತವಾದ ನೀತಿ ನಿಯಮಾವಳಿಗಳನ್ನು ರಚನೆ ಮಾಡಿದ ನಂತರ ವಿಷಯವನ್ನು ಮಂಡಳಿ ಸಭೆಯಲ್ಲಿ ಮಂಡಿಸುವಂತೆ ನಿರ್ಣಯಿಸಲಾಯಿತು. |
| **ವಿಷಯ – 9** | ಮ್ಯಾಕ್ರೋ ಕಾಮಗಾರಿಗಳನ್ನೊಳಗೊಂಡು ಆಡಳಿತಾತ್ಮಕ ಮಂಜೂರಾತಿ ನೀಡುವ ಅಧಿಕಾರವನ್ನು ಜಿಲ್ಲಾಧಿಕಾರಿ / ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಹಂಚಿಕೆ ಮಾಡಲಾಗಿದೆ. ನಂತರ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಏಜೆನ್ಸಿಗಳಿಗೆ ಅನುದಾನವನ್ನು ಬಿಡುಗಡೆ ಮಾಡುವ ಅಧಿಕಾರವನ್ನು ಸಹ ಜಿಲ್ಲಾಧಿಕಾರಿ / ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಹಂಚಿಕೆ ಮಾಡಲಾಗಿದೆ. ಜಿಲ್ಲಾಧಿಕಾರಿ / ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕಛೇರಿಗಳಲ್ಲಿ ಹೈ.ಕ.ಪ್ರ.ಅ.ಮಂಡಳಿ ಕೋಶವನ್ನು ರಚಿಸಲಾಗಿದೆ ಹಾಗು ಸದರಿ ಕೋಶದಲ್ಲಿನ ಹುದ್ದೆಗಳನ್ನು ನಿವೃತ್ತ ಅಧಿಕಾರಿಗಳನ್ನು ನೇಮಿಸುವ ಮೂಲಕ ಭರ್ತಿಗೊಳಿಸುವ ಅಧಿಕಾರವನ್ನು ಸಹ ಅವರಿಗೆ ನೀಡಲಾಗಿದೆ. |
| ಚರ್ಚೆ | ಮಾನ್ಯ ಅಧ್ಯಕ್ಷರು, ಹೈ.ಕ.ಪ್ರ.ಅ.ಮಂಡಳಿ, ಕಲಬುರಗಿ ಇವರು ಮ್ಯಾಕ್ರೋ ಕಾಮಗಾರಿಗಳನ್ನೊಳಗೊಂಡು ಆಡಳಿತಾತ್ಮಕ ಮಂಜೂರಾತಿ ನೀಡುವ ಅಧಿಕಾರವನ್ನು ಜಿಲ್ಲಾಧಿಕಾರಿ / ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಹಂಚಿಕೆ ಮಾಡಲಾಗಿದೆ. ನಂತರ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಏಜೆನ್ಸಿಗಳಿಗೆ ಅನುದಾನವನ್ನು ಬಿಡುಗಡೆ ಮಾಡುವ ಅಧಿಕಾರವನ್ನು ಸಹ ಜಿಲ್ಲಾಧಿಕಾರಿ / ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಹಂಚಿಕೆ ಮಾಡಲಾಗಿದೆ ಎಂದು ಸಭೆಯಲ್ಲಿ ಮಂಡಿಸಿದರು. ಇದರಿಂದ ಆಡಳಿತಾತ್ಮಕ ಮಂಜೂರಾತಿ ನೀಡುವ / ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಏಜೆನ್ಸಿಗಳಿಗೆ ಅನುದಾನವನ್ನು |

| | |
|---|---|
| | ಬಿಡುಗಡೆ ಮಾಡುವಲ್ಲಿ ಉಂಟಾಗುತ್ತಿದ್ದ ವಿಳಂಬವನ್ನು ತಡೆಗಟ್ಟಿದಂತಾಗಿದೆ. ಅಲ್ಲದೆ ಅಭಿವೃದ್ಧಿ ಕಾರ್ಯಗಳನ್ನು ತ್ವರಿತ ಗತಿಯಲ್ಲಿ ಕೈಗೊಳ್ಳಲು ಜಿಲ್ಲಾಧಿಕಾರಿ / ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕಛೇರಿಗಳಲ್ಲಿ ಹೈ.ಕ.ಪ್ರ.ಅ.ಮಂಡಳಿ ಕೋಶವನ್ನು ರಚಿಸಲಾಗಿದೆ ಹಾಗು ಸದರಿ ಕೋಶದಲ್ಲಿನ ಹುದ್ದೆಗಳನ್ನು ನಿವೃತ್ತ ಅಧಿಕಾರಿಗಳನ್ನು ನೇಮಿಸುವ ಮೂಲಕ ಭರ್ತಿಗೊಳಿಸುವ ಅಧಿಕಾರವನ್ನು ಸಹ ಅವರಿಗೆ ನೀಡಲಾಗಿದೆ ಎಂದು ಸಭೆಯಲ್ಲಿ ಮಂಡಿಸಿದರು. |
| ನಿರ್ಣಯ | ವಿವರವಾದ ಚರ್ಚೆಯ ನಂತರ ಮಂಡಳಿಯು ಸದರಿ ಪ್ರಸ್ತಾವನೆಗಳಿಗೆ ಒಪ್ಪಿಗೆಯನ್ನು ಸೂಚಿಸಿತು. |
| **ವಿಷಯ – 10** | ಹೈ.ಕ.ಪ್ರ.ಅ.ಮಂಡಳಿಯು ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಮಾತ್ರ ಕೈಗೆತ್ತಿಕೊಳ್ಳದೆ ಹೈ.ಕ.ಪ್ರದೇಶದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅನುಕೂಲ ಮಾಡಿಕೊಡಬೇಕು. ಆದ್ದರಿಂದ ಮಂಡಳಿಯು ಮಾಸಿಕ ರೂ.50,000/- ರಿಂದ ರೂ.1,00,000/- ವರೆಗೆ ಸಂಭಾವನೆಯನ್ನು ನೀಡುವ ಮೂಲಕ ಸರ್ಕಾರಿ ಸೇವೆಯಿಂದ ನಿವೃತ್ತಿ ಹೊಂದಿದ 10 – 15 ಸಲಹೆಗಾರರನ್ನು ನೇಮಿಸಿಕೊಳ್ಳಬಹುದು. ಸರ್ಕಾರದ ವತಿಯಿಂದ ಕೆಟಿಪಿಪಿ ಆಕ್ಟ್ ಅಡಿಯಲ್ಲಿ ವಿನಾಯಿತಿಯನ್ನು ಕೋರಬಹುದು. |
| ಚರ್ಚೆ | ಕಾರ್ಯದರ್ಶಿಗಳು, ಹೈ.ಕ.ಪ್ರ.ಅ.ಮಂಡಳಿ, ಕಲಬುರಗಿ ಇವರು ಮಂಡಳಿಯು ಪ್ರತಿ ವರ್ಷ 1,000 ರಿಂದ 1,500 ಕೋಟಿವರೆಗೆ ಸರ್ಕಾರದಿಂದ ಅನುದಾನವನ್ನು ಸ್ವೀಕರಿಸುತ್ತಿದ್ದು, ಮಂಡಳಿಯ ಕಾರ್ಯ ಹಾಗು ಜವಾಬ್ದಾರಿಗಳು ಹೆಚ್ಚಾಗಿರುವುದರಿಂದ ವಿವಿಧ ಕ್ಷೇತ್ರಗಳಲ್ಲಿನ 10 ರಿಂದ 15 ಸಲಹೆಗಾರರ ಸೇವೆಯನ್ನು ಮಾಸಿಕ ರೂ.50,000/- ರಿಂದ ರೂ.1,00,000/- ವರೆಗೆ ಸಂಭಾವನೆಯನ್ನು ನೀಡುವ ಮೂಲಕ ನೇಮಿಸಿಕೊಳ್ಳಬಹುದಾಗಿದೆಯೆಂದು ವಿಷಯ ಮಂಡಿಸಿದರು. ಅಲ್ಲದೆ ಈ ಕುರಿತು ಕೆಟಿಪಿಪಿ ಆಕ್ಟ್ ಅಡಿಯಲ್ಲಿ ವಿನಾಯಿತಿ ಕೋರುವದರೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬಹುದು ಎಂದು ಸಭೆಯಲ್ಲಿ ಮಂಡಿಸಿದರು. |
| ನಿರ್ಣಯ | ವಿವರವಾದ ಚರ್ಚೆಯ ನಂತರ ಮಂಡಳಿಯು ಸದರಿ ಪ್ರಸ್ತಾವನೆಗಳಿಗೆ ಒಪ್ಪಿಗೆಯನ್ನು ಸೂಚಿಸಿತು. |
| **ವಿಷಯ – 11** | ಟೆಂಡರ್ ಮೂಲಕ ಗುತ್ತಿಗೆ ನೀಡಿದ ಕಾಮಗಾರಿಗಳ ವಿವರಗಳನ್ನು e – procurement software ಸಹಾಯದಿಂದ ನಿರ್ವಹಿಸಬಹುದಾಗಿದೆ ಎಂದು ಮತ್ತು ಇದಕ್ಕೆ ಸಂಬಂಧಿಸಿದಂತೆ infocom ನವರು ಸಿದ್ದಪಡಿಸಿದ ಸಾಫ್ಟವೇರ್ ಕುರಿತು ಮರು ಪರಿಶೀಲನೆ ಮಾಡುವ ಅವಶ್ಯಕತೆಯಿದೆ ಎಂದು ತಿಳಿಸಿದರು. |
| ಚರ್ಚೆ | ಸಭೆಯಲ್ಲಿ ಚರ್ಚಿಸಲಾಯಿತು. |
| ನಿರ್ಣಯ | ಕ್ರಮ ಕೈಗೊಂಡಿರುವ ಕುರಿತು ಸಭೆಯು ಗಮನಿಸಿತು. |
| **ವಿಷಯ – 12** | ನೆಮ್ಮದಿ ಊರು ಪರಿಕಲ್ಪನೆಯು ರೂ.4.00 ಕೋಟಿ ವೆಚ್ಚದ ವಾಣಿಜ್ಯ ಮಳಿಗೆ ಹಾಗು ಟೌನ್ ಹಾಲ್‌ನಂತಹ ಘಟಕಗಳನ್ನೊಳಗೊಂಡಿದೆ. ಈ ಘಟಕಗಳ ನಿಜವಾದ ಉಪಯುಕ್ತತೆ / ಬಳಕೆಯನ್ನು ಪ್ರಸ್ತುತ ಪೂರ್ಣಗೊಳಿಸಲಾದ ಘಟಕಗಳಲ್ಲಿ ಮುಂದಿನ ಒಂದು ವರ್ಷದ ಬಳಕೆಯ ನಂತರ ನಿರ್ಧರಿಸಬಹುದಾಗಿದೆ. ಈ ಯೋಜನೆ ಅನುಷ್ಠಾನವಾಗದಿರುವ ನಗರ ಪ್ರದೇಶದಲ್ಲಿ ಮಂಡಳಿಯು ರೀಡಿಂಗ್ ಕಮ್ ಲೈಬ್ರೇರಿ ಕೇಂದ್ರಗಳನ್ನು ಸ್ಥಾಪಿಸಬಹುದು, ಇದು ತಜ್ಞರ ಅಧ್ಯಯನ ವರದಿಯ ಅಭಿಪ್ರಾಯವೂ ಸಹ ಆಗಿದೆ. |
| ಚರ್ಚೆ | ಕಾರ್ಯದರ್ಶಿಗಳು, ಹೈ.ಕ.ಪ್ರ.ಅ.ಮಂಡಳಿ, ಕಲಬುರಗಿ ಇವರು ರೂ.4.00 ಕೋಟಿ ವೆಚ್ಚದ ವಾಣಿಜ್ಯ ಮಳಿಗೆ ಹಾಗು ಟೌನ್ ಹಾಲ್‌ನಂತಹ ಘಟಕಗಳ ನೆಮ್ಮದಿ ಊರು ಪರಿಕಲ್ಪನೆಯನ್ನು ಹೈ.ಕ.ಪ್ರದೇಶದ ಆಯ್ದ ನಗರಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಸಭೆಯಲ್ಲಿ ಮಂಡಿಸಿದರು. ಈ ಘಟಕಗಳ ನಿಜವಾದ ಉಪಯುಕ್ತತೆ / ಬಳಕೆಯನ್ನು ಪ್ರಸ್ತುತ ಪೂರ್ಣಗೊಳಿಸಲಾದ ಘಟಕಗಳಲ್ಲಿ ಮುಂದಿನ ಒಂದು ವರ್ಷದ ಬಳಕೆಯ ನಂತರ ನಿರ್ಧರಿಸಬಹುದಾಗಿದೆ. ಇನ್ನುಳಿದ ಪ್ರಕರಣಗಳಲ್ಲಿ ಕಾಮಗಾರಿ ಇನ್ನೂ ಪ್ರಾರಂಭವಾಗಿಲ್ಲವೋ ಅಂತಹ ಪ್ರಕರಣಗಳನ್ನು ತಡೆಹಿಡಿಯಬಹುದಾಗಿದೆ ಎಂದು ಸೂಚಿಸಿದರು. ಕಾರ್ಯದರ್ಶಿಗಳು, ಹೈ.ಕ.ಪ್ರ.ಅ.ಮಂಡಳಿ ಇವರು ನೆಮ್ಮದಿ ಊರು ಯೋಜನೆ ಇನ್ನು ಪ್ರಾರಂಭವಾಗಿಲ್ಲವೋ ಅಂತಹ ಯೋಜನೆಗಳನ್ನು ಕೈಬಿಟ್ಟು ಅದರ ಬದಲಾಗಿ ನಗರ ಪ್ರದೇಶಗಳಲ್ಲಿ ವಿದ್ಯಾರ್ಥಿಗಳಿಗೆ ಕಾಲೇಜು ಅವಧಿ ಮೀರಿದ ನಂತರ ಓದಲು ರೀಡಿಂಗ್ – ಗ್ರಂಥಾಲಯ ಕೇಂದ್ರಗಳನ್ನು ನಿರ್ಮಾಣ ಮಾಡಬಹುದಾಗಿದೆ ಎಂದು ಪ್ರಸ್ತಾಪಿಸಿದರು. |
| ನಿರ್ಣಯ | ವಿವರವಾದ ಚರ್ಚೆಯ ನಂತರ ಸದರಿ ವಿಷಯವನ್ನು ಒಮ್ಮತದಿಂದ ಅನುಮೋದನೆ ಮಾಡಲಾಯಿತು. |
| **ವಿಷಯ – 13** | 2013–14, 2014–15, 2015–16 ನೆ ಸಾಲಿನ ಪ್ರಾರಂಭವಾಗದೆ ಇರುವ ಕಾಮಗಾರಿಗಳನ್ನು ಕೈಬಿಡಬಹುದು. |
| ಚರ್ಚೆ | ಚರ್ಚಿಸಿತು. |
| ನಿರ್ಣಯ | ವಿವರವಾದ ಚರ್ಚೆಯ ನಂತರ 2013–14, 2014–15, 2015–16 ನೆ ಸಾಲಿನ ಪ್ರಾರಂಭವಾಗದೆ ಇರುವ ಕಾಮಗಾರಿಗಳನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು / ವಿಧಾನಸಭಾ ಸದಸ್ಯರ ಸಲಹೆಯ ಮೇರೆಗೆ ಕೈಬಿಡಲು ನಿರ್ಣಯಿಸಲಾಯಿತು. |
| **ವಿಷಯ – 14** | ಕ್ರಿಯಾ ಯೋಜನೆ ಅನುಮೋದನೆಯಾದ ಮೇಲೆ ಆಡಳಿತಾತ್ಮಕ ಅನುಮೋದನೆಗಾಗಿ ಕಾಯದೆ ಹಂಚಿಕೆಯಾದ ಅನುದಾನದ ಮೇರೆಗೆ ಟೆಂಡರ್ ಪ್ರಕ್ರೀಯೆ ಕೈಗೊಳ್ಳಬಹುದು. ಆದಾಗ್ಯೂ ಟೆಂಡರ್ ಅಂತಿಮಗೊಳಿಸುವ ಮೊದಲು ಆಡಳಿತಾತ್ಮಕ ಅನುಮೋದನೆಯನ್ನು ಖಾತರಿಪಡಿಸಿಕೊಳ್ಳಬೇಕು. |
| ಚರ್ಚೆ | ಕಾರ್ಯದರ್ಶಿಗಳು, ಹೈ.ಕ.ಪ್ರ.ಅ.ಮಂಡಳಿ ಇವರು ಬಿ.ಬಿ.ಎಮ್.ಪಿ. ಹಾಗು ಇನ್ನಿತರ ಸರ್ಕಾರಿ ಇಲಾಖೆಗಳಂತೆ ಕಾಮಗಾರಿಗಳ ಅನುಷ್ಠಾನದಲ್ಲಿ ಉಂಟಾಗುತ್ತಿರುವ ವಿಳಂಬತೆಯನ್ನು ತಪ್ಪಿಸಲು ಕ್ರಿಯಾ ಯೋಜನೆ ಅನುಮೋದನೆಯಾದ ಮೇಲೆ ಆಡಳಿತಾತ್ಮಕ ಅನುಮೋದನೆಗಾಗಿ ಕಾಯದೆ ಹಂಚಿಕೆಯಾದ |

| | |
|---|---|
| | ಅನುದಾನದ ಮೇರೆಗೆ ಟೆಂಡರ್ ಪ್ರಕ್ರೀಯೆ ಕೈಗೊಳ್ಳಬಹುದು ಎಂದು ಸೂಚಿಸಿದರು. ಆದಾಗ್ಯೂ ಟೆಂಡರನ ಕುರಿತು ಆದೇಶ ಹೊರಡಿಸುವ ಪೂರ್ವದಲ್ಲಿ ಆಡಳಿತ ಮಂಜೂರಾತಿ ಪಡೆದುಕೊಂಡ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು ಎಂದು ತಿಳಿಸುತ್ತಾ, ಇಂತಹ ಕ್ರಮದಿಂದಾಗಿ ಕಾಮಗಾರಿಗಳ ಅನುಷ್ಠಾನದಲ್ಲಿ ಆಗುತ್ತಿರುವ ವಿಳಂಬವನ್ನು ತಡೆಗಟ್ಟಬಹುದಾಗಿದೆ ಎಂದು ತಿಳಿಸಿದರು. ಸದರಿ ವಿಷಯದ ಕುರಿತು ಸಂಬಂಧಪಟ್ಟ ಇಲಾಖೆಗಳಿಂದ ಪ್ರಸ್ತಾವನೆಗಳನ್ನು ಪರಿಶೀಲನೆಗೆ ಒಳಪಡಿಸಿದ ನಂತರ ಸೂಕ್ತವಾದ ಸಲಹೆ ಸೂಚನೆಗಳನ್ನು ನೀಡುವುದಾಗಿ ವಿವರಿಸಿದರು. |
| ನಿರ್ಣಯ | ವಿವರವಾದ ಚರ್ಚೆಯ ನಂತರ ಮಂಡಳಿಯು ಸದರಿ ಪ್ರಸ್ತಾವನೆಗಳನ್ನು ಅನುಮೋದಿಸಿತು. |
| **ವಿಷಯ – 15** | ಖಾತೆಗೆ ಜಮೆಯಾದ ರೂ.20.62 ಕೋಟಿ ಮೊತ್ತದ ಬಡ್ಡಿ ಹಣವನ್ನು ಮ್ಯಾಕ್ರೋ ಯೋಜನೆ ಕಾಮಗಾರಿಗಳ ಅನುಷ್ಠಾನಕ್ಕಾಗಿ ಬಳಸಿಕೊಂಡ ಕುರಿತು ಅನುಮೋದನೆಗಾಗಿ ಸಭೆಯಲ್ಲಿ ಮಂಡನೆ. |
| ಚರ್ಚೆ | ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಯಿತು. |
| ನಿರ್ಣಯ | ವಿವರವಾದ ಚರ್ಚೆಯ ನಂತರ ಮಂಡಳಿಯು ಸದರಿ ಪ್ರಸ್ತಾವನೆಗಳನ್ನು ಅನುಮೋದಿಸಿತು. |

ಗೌರವಾನ್ವಿತ ಅಧ್ಯಕ್ಷರು ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರು ಅಭಿವೃದ್ಧಿ ಕಾಮಗಾರಿಗಳನ್ನು ಶೀಘ್ರಗತಿಯಲ್ಲಿ ಕೈಗೊಳ್ಳಲು ನೀಡಿದ ಸಲಹೆಗಳಿಗೆ ಹಾಗೂ ಸಭೆಯಲ್ಲಿ ಪಾಲ್ಗೊಂಡಿದಕ್ಕೆ, ಎಲ್ಲಾ ಸನ್ಮಾನ್ಯ ಸದ್ಯಸರಿಗೆ ಗಣ್ಯ ವ್ಯಕ್ತಿಗಳಿಗೆ ಹಾಗೂ ಅಧಿಕಾರಿಗಳಿಗೆ ಧನ್ಯವಾದಗಳನ್ನು ತಿಳಿಸಿದರು.

ವಂದನೆಗಳೊಂದಿಗೆ ಸಭೆ ಮುಕ್ತಾಯಗೊಂಡಿತು

(ಹರ್ಷಗುಪ್ತ )
IAS
ಕಾರ್ಯದರ್ಶಿಗಳು
ಹೈ.ಕ.ಪ್ರ.ಅ.ಮಂ. ಕಲಬುರಗಿ.

(ಡಾ.ಶರಣ ಪ್ರಕಾಶ ಪಾಟೀಲ)
ಅಧ್ಯಕ್ಷರು,
ಹೈ.ಕ.ಪ್ರ.ಅ.ಮಂ. ಕಲಬುರಗಿ.
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು
ಮತ್ತು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರು.

**ಪ್ರತಿಯನ್ನು :–**

1. ಕರ್ನಾಟಕ ಸರ್ಕಾರದ ಘನತೆವೆತ್ತ ರಾಜ್ಯಪಾಲರಿಗೆ (ಪ್ರಧಾನ ಕಾರ್ಯದರ್ಶಿಗಳು ಯೋಜನಾ ಇಲಾಖೆ ಇವರ ಮುಖಾಂತರ) ಗೌರವಗಳೊಂದಿಗೆ ಅನುಮೋದನೆಗಾಗಿ ಸಲ್ಲಿಸಲಾಗಿದೆ.

2. ಸನ್ಮಾನ್ಯ ಮುಖ್ಯ ಮಂತ್ರಿಗಳು ಕರ್ನಾಟಕ ಸರ್ಕಾರ (ಪ್ರಧಾನ ಕಾರ್ಯದರ್ಶಿಗಳು ಮುಖ್ಯ ಮಂತ್ರಿಗಳ ಕಾರ್ಯಲಯ) ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಲಾಗಿದೆ.

3. ಹೈದ್ರಾಬಾದ ಕರ್ನಾಟಕ ಪ್ರದೇಶದ ಕೆಳಕಂಡ ಸನ್ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರುಗಳಿಗೆ ಗೌರವಗಳೊಂದಿಗೆ ಸಲ್ಲಿಸಲಾಗಿದೆ :
   i. ಡಾ॥ಶರಣಪ್ರಕಾಶ ಪಾಟೀಲ್, ಸನ್ಮಾನ್ಯ ಅಧ್ಯಕ್ಷರು, ಹೈ.ಕ.ಪ್ರ.ಅ.ಮಂಡಳಿ, ಕಲಬುರಗಿ, ಹಾಗೂ ಮಾನ್ಯ ವೈದ್ಯಕಿಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರು.
   ii. ಶ್ರೀ ಬಸವರಾಜರಾಯರೆಡ್ಡಿ, ಮಾನ್ಯ ಉನ್ನತ ಶಿಕ್ಷಣ ಸಚಿವರು ಕರ್ನಾಟಕ ಸರ್ಕಾರ ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರು.
   iii. ಶ್ರೀತನ್ವೀರ್‌ಸೇಟ್ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗು ಅಲ್ಪ ಸಂಖ್ಯಾತ ಹಾಗೂ ವಕ್ಫ್ ಸಚಿವರು ಕರ್ನಾಟಕ ಸರ್ಕಾರ ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರು.
   iv. ಶ್ರೀಸಂತೋಷ್‌ಲಾಡ್ ಮಾನ್ಯ ಕಾರ್ಮಿಕ ಸಚಿವರು ಕರ್ನಾಟಕ ಸರ್ಕಾರ ಹಾಗು ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರು.
   v. ಶ್ರೀಈಶ್ವರಖಂಡ್ರೆ ಮಾನ್ಯ ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗು ಸಾರ್ವಜನಿಕ ಉದ್ದಿಮೆಗಳ ಸಚಿವರು ಕರ್ನಾಟಕ ಸರ್ಕಾರ (ರಾಜ್ಯ ಸಚಿವರು – ಸ್ವತಂತ್ರ ಪ್ರಭಾರ) ಹಾಗು ಬೀದರ್ ಜಿಲ್ಲೆ ಉಸ್ತುವಾರಿ ಸಚಿವರು.
   vi. ಶ್ರೀ ಪ್ರಿಯಾಂಕ ಖರ್ಗೆಮಾನ್ಯ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗು ಪ್ರವಾಸೋದ್ಯಮ ಸಚಿವರು ಕರ್ನಾಟಕ ಸರ್ಕಾರ (ರಾಜ್ಯ ಸಚಿವರು – ಸ್ವತಂತ್ರ ಪ್ರಭಾರ) ಹಾಗು ಯಾದಗಿರಿ ಜಿಲ್ಲೆ ಉಸ್ತುವಾರಿ ಸಚಿವರು.

4. ಪ್ರತಿಯನ್ನು ಹೈ ಕ ಪ್ರ ಅ ಮಂಡಳಿಯ ಗೌರವಾನ್ವಿತ ಸದಸ್ಯರುಗಳಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.

5. ಪ್ರತಿಯನ್ನು ಮಾನ್ಯ ಮುಖ್ಯ ಕಾರ್ಯದರ್ಶಿಗಳು ಕರ್ನಾಟಕ ಸರ್ಕಾರ ( ಪ್ರಧಾನ ಕಾರ್ಯದರ್ಶಿಗಳು ಮಾನ್ಯ ಮುಖ್ಯ ಕಾರ್ಯದರ್ಶಿಗಳ ಕಚೇರಿ ಮುಖಾಂತರ) ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.

6. ಪ್ರತಿಯನ್ನು ಹೈ.ಕ.ಪ್ರ.ಅ.ಮಂಡಳಿಯ ವ್ಯಾಪ್ತಿಯ ಮಾನ್ಯ ಲೋಕಸಭಾ ಮತ್ತು ರಾಜ್ಯ ಸಭಾ ಸದಸ್ಯರುಗಳಿಗೆ ಗೌರವಗಳೊಂದಿಗೆ ಸಲ್ಲಿಸಲಾಗಿದೆ: ಬೀದರ, ಕಲಬುರಗಿ, ಯಾದಗಿರ, ರಾಯಚೂರು, ಬಳ್ಳಾರಿ, ಕೊಪ್ಪಳ.

7. ಪ್ರತಿಯನ್ನು ಹೈ.ಕ.ಪ್ರ.ಅ.ಮಂಡಳಿಯ ವ್ಯಾಪ್ತಿಯ ಮಾನ್ಯ ವಿಧಾನ ಸಭಾ ಮತ್ತು ವಿಧಾನ ಪರಿಷತ್ತ ಸದಸ್ಯರುಗಳಿಗೆ ಗೌರವಗಳೊಂದಿಗೆ ಸಲ್ಲಿಸಲಾಗಿದೆ : ಬೀದರ, ಕಲಬುರಗಿ, ಯಾದಗಿರ, ರಾಯಚೂರು, ಬಳ್ಳಾರಿ, ಕೊಪ್ಪಳ.

8. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಮತ್ತು ಸಾಂಖ್ಯಿಕ ಇಲಾಖೆ, ವಿಕಾಸ ಸೌಧ, ಬೆಂಗಳೂರು ರವರಿಗೆ ದಯಾಪರ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

9. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು ರವರಿಗೆ ದಯಾಪರ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

10. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಬೆಂಗಳೂರು ರವರಿಗೆ ದಯಾಪರ ಮಾಹಿತಿಗಾಗಿ ಸಲ್ಲಿಸಲಾಗಿದೆ.

11. ಪ್ರತಿಯನ್ನು ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ವ್ಯಾಪ್ತಿಯ ಎಲ್ಲಾ ಜಿಲ್ಲೆಯ ಜಿಲ್ಲಾ ಪಂಚಾಯತ ಅಧ್ಯಕ್ಷರು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ : ಬೀದರ, ಕಲಬುರಗಿ, ಯಾದಗಿರ, ರಾಯಚೂರು, ಬಳ್ಳಾರಿ, ಕೊಪ್ಪಳ.

12. ಪ್ರತಿಯನ್ನು ಹೈ.ಕ.ಪ್ರ.ಅ.ಮಂಡಳಿಯ ವ್ಯಾಪ್ತಿಯ ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಮಾಹಿತಿಗಾಗಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ : ಬೀದರ, ಕಲಬುರಗಿ, ಯಾದಗಿರ, ರಾಯಚೂರು, ಬಳ್ಳಾರಿ, ಕೊಪ್ಪಳ.

13. ಪ್ರತಿಯನ್ನು ಹೈ.ಕ.ಪ್ರ.ಅ.ಮಂಡಳಿಯ ವ್ಯಾಪ್ತಿಯ ಎಲ್ಲಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತರವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ : ಬೀದರ, ಕಲಬುರಗಿ, ಯಾದಗಿರ, ರಾಯಚೂರು, ಬಳ್ಳಾರಿ, ಕೊಪ್ಪಳ.

14. ಪ್ರತಿಯನ್ನು ಆಯುಕ್ತರು ಮಹಾನಗರ ಪಾಲಿಕೆ ಕಲಬುರಗಿ ಮತ್ತು ಬಳ್ಳಾರಿ ರವರ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ.

15. ಪ್ರತಿಯನ್ನು ಹೈ.ಕ.ಪ್ರ.ಅ.ಮಂಡಳಿಯ ವ್ಯಾಪ್ತಿಯ ಎಲ್ಲಾ ಜಿಲ್ಲೆಯ ಕಂದಾಯ ಉಪವಿಭಾಗದ ಸಹಾಯಕ ಆಯುಕ್ತರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

16. ಪ್ರತಿಯನ್ನು ಹೈ.ಕ.ಪ್ರ.ಅ.ಮಂಡಳಿಯ ವ್ಯಾಪ್ತಿಯ ಎಲ್ಲಾ ಜಿಲ್ಲೆಗಳಲ್ಲಿನ ಅಧ್ಯಕ್ಷರು ತಾಲೂಕಾ ಪಂಚಾಯತ ರವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.

17. ಪ್ರತಿಯನ್ನು ಹೈ.ಕ.ಪ್ರ.ಅ.ಮಂಡಳಿಯ ವ್ಯಾಪ್ತಿಯ ಎಲ್ಲಾ ಜಿಲ್ಲೆಗಳಲ್ಲಿನ ತಾಲೂಕಾ ತಹಶೀಲ್ದಾರರವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ : ಬೀದರ, ಕಲಬುರಗಿ, ಯಾದಗಿರ, ರಾಯಚೂರು, ಬಳ್ಳಾರಿ, ಕೊಪ್ಪಳ.

18. ಪ್ರತಿಯನ್ನು ಹೈ.ಕ.ಪ್ರ.ಅ.ಮಂಡಳಿಯ ವ್ಯಾಪ್ತಿಯ ಎಲ್ಲಾ ಜಿಲ್ಲೆಗಳಲ್ಲಿನ ತಾಲೂಕಾ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತರವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

19. ಅ) ಪ್ರತಿಯನ್ನು ಹೈ.ಕ.ಪ್ರ.ಅ.ಮಂಡಳಿಯ ವ್ಯಾಪ್ತಿಯ ಎಲ್ಲಾ ಜಿಲ್ಲೆಯ ಆಯುಕ್ತರು ನಗರ ಸಭೆ ರವರಿಗೆ ಮಾಹಿತಿಗಾಗಿಕಳುಹಿಸಲಾಗಿದೆ.

    ಆ)ಪ್ರತಿಯನ್ನು ಹೈ.ಕ.ಪ್ರ.ಅ.ಮಂಡಳಿಯ ವ್ಯಾಪ್ತಿಯ ಎಲ್ಲಾ ಜಿಲ್ಲೆಗಳ ಮುಖ್ಯಾಧಿಕಾರಿಗಳು ಪುರಸಭೆರವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.

    ಇ)ಪ್ರತಿಯನ್ನು ಹೈ.ಕ.ಪ್ರ.ಅ.ಮಂಡಳಿಯ ವ್ಯಾಪ್ತಿಯ ಎಲ್ಲಾ ಜಿಲ್ಲೆಗಳ ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯತರವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.

20. ಮಂಡಳಿಯ ಕಾರ್ಯಾಲಯದ ವಿವಿಧ ವಿಭಾಗದ ಮುಖ್ಯಸ್ಥರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕೊಡಲಾಗಿದೆ.

21. ಹೆಚ್ಚಿನ ಪ್ರತಿಗಳು.